MYSORE LEGISLATIVE ASSEMBLY

FIFTH DAY.

Friday, 25th February 1955.

The House met in the Legislative Assembly Hall, Old Public Offices, Bangalore, at Twelve of the Clock.

MR. SPEAKER (SRI H. S. RUDRAPPA, B.SC., LL.B.) in the Chair.

QUESTIONS AND ANSWERS.

New Irrigation Projects (Channapatna Taluk).

Q.—20. Sri S. KARIAPPA (Virupakshapura).—

Will the Government be pleased to state :—

(*a*) the names of new irrigation projects for which plans and estimates have been prepared (details for Channapatna Taluk may please be given);

(*b*) the names of those new projects which are proposed to be taken up during 1955-56 (details for Channapatna Taluk may please be given);

(*c*) the names of new projects taken up during the past ten years in Channapatna Taluk?

A.—**Sri Kadidal MANJAPPA (Minister for Revenue and Public Works).**—

(*a*) Please see Statement 'A' appended below.

(*b*) The proposals are still under consideration.

(*c*) Please see Statement 'B' appended below.

STATEMENT 'A'.

Name of Work.—

(1) Constructing a new tank across Hebbahalla at Dasavara village.
(2) Constructing a new tank across Addahalla near Neralur village.
(3) Restoring Ujjanahalli breached tank.

STATEMENT 'B'.

Name of Work.—

(1) Construction of Bommenahalli tank.
(2) Constructing a pick-up across the halla of Thimmasandra tank.
(3) Constructing a pick-up channel for Mukunda tank.
(4) Constructing a pick-up and a relieving weir in 3/6 across Gadangahalla.
(5) Constructing an ane across halla near Krishnapura.
(6) Pick-up channel in Left Bank Settyhalli tank.
(7) Constructing a pick-up near Bommenahalli.
(8) Pick-up across the Right Bank Channel of Kanva Reservoir near Hanumapura doldi to assure water supply to the existing atchkat.

ಶ್ರೀ ಎಸ್. ಕರಿಯಪ್ಪ.—ತಾವು ಇಲ್ಲಿ ಉತ್ತರದಲ್ಲಿ ಒಡೆದುಹೋಗಿರುವ ಉಚ್ಚುನಹಳ್ಳಿ ಕೆರೆಯನ್ನು ದುರಸ್ತಿ ಪಡಿಸುವುದು ಎಂದು ಹೇಳಿದ್ದೀರಲ್ಲಾ ಈ ಕೆರೆಯ ಕೆಲಸ ಎಷ್ಟು ದಿವಸಗಳಿಂದ ಹೀಗೆ ಒದ್ದಾಡುತ್ತಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ಬಹಳ ದಿವಸಗಳಿಂದ ಎಂಬುದಾಗಿ ನನಗೆ ಜ್ಞಾಪಕವಿದೆ.

ಶ್ರೀ ಎಸ್. ಕರಿಯಪ್ಪ.—ಇದರ ಬಗ್ಗೆ ತಾವು objection ಗಳನ್ನು call for ಮಾಡಿ ಎಷ್ಟು ದಿವಸಗಳಾದವು ?

ಶ್ರೀ ಕಡಿದಾಳ್ ಮಂಜಪ್ಪ.—ಕಳೆದ ನವೆಂಬರ್ ತಿಂಗಳಿನಲ್ಲಿ ಇದರ ಸಂಬಂಧವಾಗಿ ಬಂದಿದ್ದಂಥ ಕಾಂಟ್ರಿಬ್ಯೂಷ್ ಮುಚ್ಚಳಿಕೆಗಳನ್ನೂ ಮತ್ತು ಅಂದಾಜನ್ನೂ ಪುನಃ ಪರಿಶೀಲನೆಗಾಗಿ ವಾಪಸ್ಸು ಕಳುಹಿಸಲಾಗಿದೆ.

ಶ್ರೀ ಎಸ್. ಕರಿಯಪ್ಪ.—ಹಾಗಿದ್ದರೆ ಇದರ ಬಗ್ಗೆ ಏನೂ objection ಗಳು ಬಂದಿಲ್ಲವೋ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಎಸ್. ಕರಿಯಪ್ಪ.—ಈ ಕೆಲಸ ಇಷ್ಟು ನಿಧಾನವಾಗುವುದಕ್ಕೆ ಕಾರಣಗಳೇನು ?

ಶ್ರೀ ಕಡಿದಾಳ್ ಮಂಜಪ್ಪ.—ಇದರ ಬಗ್ಗೆ ತಯಾರಿಸಲಾಗಿದ್ದಂಥ ಅಂದಾಜು ಮೊಬಲಗಿಗೂ ಮತ್ತು ರೈತರು ಬರೆದುಕೊಟ್ಟಿದ್ದ ಕಾಂಟ್ರಿಬ್ಯೂಷ್ ಮುಚ್ಚಳಿಕೆಗೂ ಬಹಳ ಏರು ಪೇರಿತ್ತು. ಆದಕಾರಣ ಅದನ್ನು ಪುನಃ ಪರಿಶೀಲನೆಗೆ ವಾಪಸ್ಸು ಕಳುಹಿಸಿ ಕೊಡಲಾಗಿದೆ.

ಶ್ರೀ ಎಸ್. ಕರಿಯಪ್ಪ.—ಈ ಹಿಂದೆಯೇ ಆ ರೈತರೆಲ್ಲರೂ ಕಾಂಟ್ರಿಬ್ಯೂಷ್ ಕೊಡಲು ಒಪ್ಪಿದ್ದರಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಕಾಂಟ್ರಿಬ್ಯೂಷ್ ಕೊಡುವುದಕ್ಕೇನೋ ಒಪ್ಪಿದ್ದರು. ಆದರೆ ಅದು ಸಾಲದೆಂದು ಪುನಃ ವಾಪಸ್ ಕಳುಹಿಸಿಕೊಡಲಾಗಿದೆ.

ಶ್ರೀ ಎಸ್. ಕರಿಯಪ್ಪ.—ಹಾಗಾದರೆ ಈ ಕೆಲಸದ ಅಂದಾಜು ಮೊಬಲಗೆಷ್ಟು ?

ಶ್ರೀ ಕಡಿದಾಳ್ ಮಂಜಪ್ಪ.—90 ಸಾವಿರ ರೂಪಾಯಿಗಳು.

ಶ್ರೀ ಎಸ್. ಕರಿಯಪ್ಪ.—ಹಾಗಾದರೆ ಈ ಕಾಂಟ್ರಿಬ್ಯೂಷ್ ಎಕರೆ ಒಂದಕ್ಕೆ ಎಷ್ಟು work out ಆಗುತ್ತದೆ ?

ಶ್ರೀ ಕಡಿದಾಳ್ ಮಂಜಪ್ಪ.—ಆ ಅಚ್ಚುಕಟ್ಟು ಎಷ್ಟು ಏನು ಎಂಬ ಅಂಕಿ ಅಂಶಗಳು ಈಗ ನನ್ನಲ್ಲಿಲ್ಲ.

ಶ್ರೀ ಎಸ್. ಕರಿಯಪ್ಪ.—ಈ ನೇರಲೂರು ಕೆರೆ ಕೆಲಸಕೂಡ ಎಷ್ಟು ದಿವಸಗಳಿಂದ ಹೀಗೆ ತಳ್ಳಿಕೊಂಡು ಬರಲಾಗುತ್ತಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ಇದು ಬಹಳ costly ಪ್ರಾಜೆಕ್ಟ್. ಖರ್ಚು ಹೆಚ್ಚಾಗಿ ರಿಟರ್ನ್ ಬಹಳ ಕಡಮೆಯಾಗಿದೆ. ಆದುದರಿಂದ ಈ ಕೆಲಸವನ್ನು ತೆಗೆದು ಕೊಳ್ಳುವುದಕ್ಕಾಗುವುದಿಲ್ಲವೆಂದು ಅಧಿಕಾರಿಗಳು ವರದಿ ಮಾಡಿದ್ದಾರೆ.

ಶ್ರೀ ಎಸ್. ಕರಿಯಪ್ಪ.—ಹೀಗಾಗುವುದಕ್ಕೆ ಕಾರಣ ಈ ಕೆರೆಗೆ ತೂಬನ್ನು ಒಂದು ಕಡೆ ಮಾತ್ರ ಇಟ್ಟಿರುವುದರಿಂದ ಹೀಗಾಗಿದೆ. ಇದಕ್ಕೆ 2 ತೂಬುಗಳನ್ನು ಇಟ್ಟಲ್ಲಿ ಅಷ್ಟು ಖರ್ಚು ಬರುವುದಿಲ್ಲವೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ತೂಬನ್ನು ಹೆಚ್ಚಿಸಿಬಿಟ್ಟರೆ ಖರ್ಚುಕಡಮೆಯಾಗುವುದಿಲ್ಲ. ಇದಕ್ಕೆ 3 ಲಕ್ಷದ ಮೇಲೆ ಖರ್ಚಾಗುತ್ತದೆ; ಆದ್ದರಿಂದ ಇದು ಬಹಳ ಕಷ್ಟದ ಕೆಲಸ.

ಶ್ರೀ ಎಸ್. ಕರಿಯಪ್ಪ.—ಈ ಹಿಂದೆ ಇದ್ದಂಥ ಇಂಜಿನಿಯರುಗಳು ಈ ಕೆಲಸ ಕೈಗೊಳ್ಳುವುದಕ್ಕೆ ಸಾಧ್ಯವಿದೆಯೆಂದು ಅಭಿಪ್ರಾಯ ಕೊಟ್ಟಿರುವುದು ತಮ್ಮ ಗಮನದಲ್ಲಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿಚಾರ ಮತ್ತೊಂದಾವರ್ತಿ ನೊಡುತ್ತೇನೆ. ಈಗ ನನ್ನಲ್ಲಿರುವ ದಾಖಲೆಗಳಿಂದ ಆ ವಿಚಾರ ಗೊತ್ತಾಗುವುದಿಲ್ಲ.

ಶ್ರೀ ಎಸ್. ಕರಿಯಪ್ಪ.—ಈ ಅಡ್ಡಗಟ್ಟೆಯ ಎತ್ತರವನ್ನು ಹೆಚ್ಚಿಸಬೇಕೆಂದು ಜನಗಳಿಂದ ತಮಗೆ ಮನವಿಗಳು ಬಂದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಎಸ್. ಕರಿಯಪ್ಪ.—ಇದರ ಪುನಃ ಪರಿಶೀಲನೆಯನ್ನು ಬೇಗ ಮುಗಿಸಿ ಇದನ್ನು ಇತ್ಯರ್ಥ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಆಗಲು ನೋಡೋಣ.

ಶ್ರೀ ವಿ. ವೆಂಕಟಪ್ಪ.—ತಾವು ಇಲ್ಲಿ ಕೊಟ್ಟರತಕ್ಕಂಥ ಮೂರು ಕೆರೆಗಳಲ್ಲಿ ದಾಶಪಾರ ಗ್ರಾಮದ ಹತ್ತಿರ ಹೆಬ್ಬಹಳ್ಳಕ್ಕೆ ಅಡ್ಡಲಾಗಿ ಕಟ್ಟತಕ್ಕಂಥ ಹೊಸ ಕೆರೆಯ ಅಚ್ಚುಕಟ್ಟು ಎಷ್ಟು ಮತ್ತು ಆ ಕೆರೆಯಿಂದ ಮುಳುಗಡೆಯಾಗತಕ್ಕಂಥ ಜಮೀನಿನ ವಿಸ್ತೀರ್ಣವೆಷ್ಟು ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿವರಗಳೆಲ್ಲ ಈಗ ನನ್ನ ಸದ್ಯಕ್ಕೆ ನನ್ನಲ್ಲಿಲ್ಲ.

ಶ್ರೀ ವಿ. ವೆಂಕಟಪ್ಪ.—ಈಗ ಈ 3 ಕೆರೆಗಳ ವಿವರಗಳೂ ತಮ್ಮಲ್ಲಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ವಿ. ವೆಂಕಟಪ್ಪ.—ಈ ದಾಶಪಾರದ ಹೆಬ್ಬಹಳ್ಳಕ್ಕೆ ಅಣೆಕಟ್ಟು ಹಾಕುವುದಕ್ಕೆ ಬದಲಾಗಿ ಈಗಾಗಲೇ ಅಲ್ಲಿರತಕ್ಕಂಥ ಒಂದು ಚಿಕ್ಕಕಟ್ಟೆಯೇನಿದೆಯೋ ಅದನ್ನೇ ಜೀರ್ಣೋದ್ಧಾರಮಾಡಿಕೊಟ್ಟರೆ ಅದರಿಂದ 30-40 ಎಕರೆ ಹೆಚ್ಚು ಸಾಗುವಳಿಗೆ ಬರುತ್ತದೆಯೆಂಬ ಅಂಶ ಗೊತ್ತಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ವಿ. ವೆಂಕಟಪ್ಪ.—ಹೋಗಲಿ. ಈಗ ತಾವು ಹೊಸದಾಗಿ ಕಟ್ಟತಕ್ಕ ಕೆರೆಯಿಂದ ಸಾಗಾಗತಕ್ಕಂಥ 70-80 ಎಕರೆ ಜಮೀನು ನೀರು ಮುಳುಗಡೆಯಾಗುತ್ತದೆ ಎಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ವಿ. ವೆಂಕಟಪ್ಪ.—ಚೆನ್ನಪಟ್ಟಣ ತಾಲ್ಲೂಕಿನಲ್ಲಿ ಈ ಬೊಮ್ಮನಹಳ್ಳಿ ಕೆರೆ ಅನ್ನುವುದು ಎಲ್ಲಿ ಇದೆ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲಿ ಬೊಮ್ಮನಹಳ್ಳಿ ಎಂದು ಹಾಕಿದ್ದಾರೆ. ಇದರ ವೆಚ್ಚ 19 ಸಾವಿರದ 780 ರೂಪಾಯಿಗಳು, ಅಚ್ಚುಕಟ್ಟು 25 ಎಕರೆಗಳೆಂದೂ, ಈ ಕೆಲಸಕ್ಕಾಗಿ ಈಗಾಗಲೇ 11,625 ರೂಪಾಯಿಗಳು ಖರ್ಚಾಗಿರುತ್ತದೆಯೆಂದೂ, ಆ ಕೆಲಸವಿನ್ನೂ ನಡೆಯುತ್ತಿದೆಯೆಂದೂ ತಿಳಿಸಿದ್ದಾರೆ.

Reservoir near Ranaghatta (Survey).

Q.—33. **Sri B. N. BORANNA GOWDA (Belur).**—

Will the Government be pleased to state :—